# ಮಕ್ಕಳಿಗೆ ಎಂಆರ್ ಲಸಿಕೆ ಹಾಕಿಸಿದ್ದೀರಾ?

ದಡಾರ ಮತ್ತು ಕೆಂಬಾರ (ರುಬೆಲ್ಲ) ಸೋಂಕಿನಿಂದ ಬರುವ ಕಾಯಿಲೆ. ಮಕ್ಕಳಿಗೆ ಬರುವ ಈ ಕಾಯಿಲೆ ನಿವಾರಣೆಗೆ ಎಂಆರ್ (ಮೀಸಲ್ಸ್/ರುಬೆಲ್ಲ) ಲಸಿಕೆ ಹಾಕಿಸಿಕೊಳ್ಳಬೇಕು. ಈ ಬಗ್ಗೆ ಸರ್ಕಾರ ಲಸಿಕಾ ಅಭಿಯಾನ ಕೈಗೊಂಡಿದ್ದು 9 ತಿಂಗಳಿನಿಂದ 15 ವರ್ಷದೊಳಗಿನ ಮಕ್ಕಳು ಲಸಿಕೆ ಹಾಕಿಸಿಕೊಳ್ಳುವುದು ಕಡ್ಡಾಯ.

**■ ಡಾ. ಆಶಾ ಬೆನಕಪ್ಪ**

ಸದ್ಯ ಶಾಲೆಗಳಲ್ಲಿ, ಆರೋಗ್ಯ ಕೇಂದ್ರಗಳಲ್ಲಿ, ಸರ್ಕಾರಿ ಆಸ್ಪತ್ರೆಗಳಲ್ಲಿ ದಡಾರ, ರುಬೆಲ್ಲ ಚುಚ್ಚುಮದ್ದಿನದ್ದೇ ಸುದ್ದಿ. ಶಾಲೆಗಳಲ್ಲಿ ಹೆದರಿ ಹೆದರಿಕೊಂಡೇ ಸಾಲುಗಟ್ಟಿ ಬಂದ ಮಕ್ಕಳಿಗೆ ಚುಚ್ಚುಮದ್ದು ಹಾಕುವ ಕೆಲಸ ಆರೋಗ್ಯ ಸಿಬ್ಬಂದಿಗಳಿಂದ ನಡೆಯುತ್ತಿದೆ.

ಹೌದು, ಭಯಾನಕ ಕಾಯಿಲೆ ಎಂದೇ ಬಿಂಬಿತವಾದ ದಡಾರ ಮತ್ತು ರುಬೆಲ್ಲ ಲಸಿಕೆ 9 ತಿಂಗಳಿಂದ 15 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯ ಎಂಬುದನ್ನು ಆರೋಗ್ಯ ಇಲಾಖೆ ಹೇಳಿರುವುದರಿಂದ ಈ ಲಸಿಕೆ ಅಭಿಯಾನ ಇದೀಗ ಶಾಲೆಗಳಲ್ಲಿ, ಆರೋಗ್ಯ ಕೇಂದ್ರಗಳಲ್ಲಿ ನಡೆಯುತ್ತಿದೆ. ಫೆಬ್ರುವರಿ 28ರವರೆಗೆ ಈ ಲಸಿಕೆ ಕಾರ್ಯಕ್ರಮ ಚಾಲನೆಯಲ್ಲಿರುತ್ತದೆ.

ದಡಾರ ಮತ್ತು ಕೆಂಬಾರ (ಎಂಆರ್) ಲಸಿಕೆಯನ್ನು ಈ ಮೇಲೆ ತಿಳಿಸಿದ ವಯಸ್ಸಿನೊಳಗೆ ಬರುವ ಮಕ್ಕಳು ಇದಕ್ಕೆ ಮುಂಚಿತವಾಗಿ ಹಾಕಿಸಿಕೊಂಡಿದ್ದರೂ ಮತ್ತೆ ಹಾಕಿಸಿಕೊಳ್ಳಲೇ ಬೇಕು. ಈ ರೋಗದ ಸೋಂಕಿನಿಂದ ಬಳಲಿರಲಿ ಅಥವಾ ಇಲ್ಲದಿರಲಿ ಈಗ ಮತ್ತೆ ಚುಚ್ಚಿಸಿಕೊಳ್ಳಬೇಕು.

ಈ ಲಸಿಕೆ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿ ರೋಗ ಬರದಂತೆ ತಡೆಯುತ್ತದೆ. ಹೀಗಾಗಿ ಕೆಲವು ತಂದೆ ತಾಯಿಯರಲ್ಲಿ ಲಸಿಕೆ ಹಾಕಿಸಬೇಕೇ ಬೇಡವೇ ಎಂಬ ಗೊಂದಲವನ್ನು ನಿವಾರಿಸಿಕೊಳ್ಳಬೇಕಾಗಿದೆ. ಮಾರಣಾಂತಿಕ ಕಾಯಿಲೆಗಳು ಬರದಂತೆ ಮಕ್ಕಳನ್ನು ರಕ್ಷಿಸುವುದರಲ್ಲಿ ರೋಗ ನಿರೋಧಕ ಲಸಿಕೆ ಬಹಳ ಪರಿಣಾಮಕಾರಿ. ಮಕ್ಕಳಿಗೆ ಈ ಲಸಿಕೆಗಳನ್ನು ಹಾಕದಿದ್ದಲ್ಲಿ ದಡಾರ, ರುಬೆಲ್ಲ ರೋಗ ಬರುವ ಸಾಧ್ಯತೆ ಇದೆ. ಅಲ್ಲದೆ ಇದರ ಪರಿಣಾಮಗಳು ಮತ್ತು ಬರಬಹುದಾದ ಶಾಶ್ವತ ನ್ಯೂನತೆಗಳನ್ನು ಮಗು ಮತ್ತು ಪೋಷಕರು ಎದುರಿಸಬೇಕಾಗುತ್ತದೆ.

### ಏನಿದು ದಡಾರ?

ದಡಾರ ಒಂದು ಸಾಂಕ್ರಾಮಿಕ ರೋಗವಾಗಿದ್ದು ಪ್ಯಾರೊಮಿಕ್ಸ್ ಎಂಬ ವೈರಸ್ ಈ ರೋಗಕ್ಕೆ ಕಾರಣವಾಗಿದೆ. ಪ್ಯಾರಾ ಮಿಕ್ಸೋ ಗುಂಪಿಗೆ ಸೇರಿದ 'ಮೋರ್ಬಿಲಿ' ಎನ್ನುವ ವೈರಸ್ ಗಳಿಂದ ಉದ್ಭವಿಸುವ ದಡಾರವನ್ನು ವೈದ್ಯಕೀಯ ಪರಿಭಾಷೆಯಲ್ಲಿ 'ಮೀಸಲ್ಸ್' ಎಂದು ಕರೆಯುತ್ತಾರೆ.

ಈ ಕಾಯಿಲೆ ಹೆಚ್ಚಾಗಿ ಮಕ್ಕಳನ್ನು ಕಾಡುತ್ತದೆ. ಅತ್ಯಂತ ಕ್ಷಿಪ್ರಗತಿಯಲ್ಲಿ ಸಾಂಕ್ರಾಮಿಕವಾಗಿ ಹರಡಿ ತೀವ್ರ ರೂಪವನ್ನು ತಾಳುವ ಈ ವ್ಯಾಧಿಯು, ಆರು ತಿಂಗಳ ಒಳಗಿನ ಹಸುಗೂಸುಗಳನ್ನು ಬಾಧಿಸದು. ಆದರೆ ಐದರಿಂದ ಎಂಟು ವರ್ಷ ವಯಸ್ಸಿನ ಮಕ್ಕಳನ್ನು ಹೆಚ್ಚಾಗಿ ಪೀಡಿಸುವ ಈ ವ್ಯಾಧಿಯು ಬೇಸಿಗೆಯ ದಿನಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.

### ಲಕ್ಷಣಗಳೇನು?

- ತೀವ್ರವಾದ ಶ್ವಾಸಕೋಶದ ಸೋಂಕು
- ಜ್ವರ, ಕೆಮ್ಮು, ನೀರಿನಿಂದ ಕೂಡಿದ ಕಣ್ಣು ಮತ್ತು ಸಿಂಬಳ ಸುರಿಯುವುದು
- ಬಾಯಿಯಲ್ಲಿ ಕೆಂಪಾದ ತಿಳಿನೀಲಿ ತುದಿಯ ಗುಳ್ಳೆಗಳಾಗುತ್ತವೆ
- ದೇಹದ ಪೂರ್ತಿ ಚರ್ಮದ ಮೇಲೆ ಚಿಕ್ಕಚಿಕ್ಕ ಗುಳ್ಳೆಗಳು
- ಪ್ರಾಥಮಿಕ ಹಂತದಲ್ಲಿ ಜ್ವರ, ಮೈ ಕೈ ನೋವು
- ಮೂಗಿನಿಂದ ನೀರಿಳಿಯುವುದು,
- ಕರ್ಕಶವಾದ ಸದ್ದಿನೊಂದಿಗೆ ಕೆಮ್ಮು
- ಕಣ್ಣಾಲಿಗಳ ಉರಿಯೂತ ಹಾಗೂ ಬೆಳಕನ್ನು ನೋಡಲಾಗದಂತಹ ತೊಂದರೆಗಳು ಕಾಣಿಸಿಕೊಳ್ಳುತ್ತವೆ.

